MVC No.345/2024

PW-01

**ದಿನಾಂಕಃ 24-02-2026.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲು:1 ನೇ ಎದುರುದಾರ ಪರ ಶ್ರೀ SGF ಮಾನ್ಯ ವಕೀಲರಿಂದಃ**

ಸದರಿ ವಾಹನದ ನಂಬರ KA-33-Y-6273 ಆಗಿರುತ್ತದೆ. ಸದರಿ ಮೋಟಾರ ಸೈಕಲ ಬಜಾಜ್ two wheeler ಆಗಿರುತ್ತದೆ. ಸದರಿ ದಿನದಂದು ಸದರಿ ಮೋಟಾರ ಸೈಕಲ ಮೇಲೆ ನಾನು ಹಾಗೂ ನನ್ನ ತಾಯಿ ಹೊಗುತ್ತಿದ್ದೇವು. ಸದರಿ ಅಪಘಾತವಾದ ಸಂದರ್ಭದಲ್ಲಿ ನನ್ನ ತಾಯಿಗೆ 45 ವರ್ಷ ವಯಸ್ಸಾಗಿತ್ತು. ನನ್ನ ಅರ್ಜಿಯ ಒಕ್ಕಣಿಗಳ ಮಾಹಿತಿಯನ್ನು ನನ್ನ ಮಾನ್ಯ ವಕೀಲರಿಗೆ ನನ್ನ ಸಹೋದರ ಕೊಟ್ಟಿರುತ್ತಾರೆ. ಸದರಿ ಅರ್ಜಿಯ ಒಕ್ಕಣಿಗಳ ಮಾಹಿತಿಯನ್ನು ನಾನು ನನ್ನ ಸಹೋದರ ಇವರಿಗೆ ಕೊಟ್ಟಿದ್ದು ಅವರು ಸದರಿ ಮಾಹಿತಿಯನ್ನು ನನ್ನ ಮಾನ್ಯ ವಕೀಲರಿಗೆ ಹೇಳಿರುತ್ತಾರೆ. ಸದರಿ ಅರ್ಜಿಗೆ ನನ್ನ ಸದರಿ ಸಹೋದರ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಅಪಘಾತ ಕುರಿತಂತೆ ಪೊಲೀಸರಿಗೆ ನನ್ನ ಹೇಳಿಕೆಯನ್ನು ದಿಃ 28-10-2024 ರಂದು ಕೊಟ್ಟಿರುತ್ತೇನೆ ಹಾಗೂ ನನ್ನ ಸದರಿ ಹೇಳಿಕೆಯ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ ಎಂದರೆ ಸರಿ. ನನ್ನ ಸದರಿ ಹೇಳಿಕೆಯ ಮಾಹಿತಿಯನ್ನು ಪೊಲೀಸರಿಗೆ ನಾನೇ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ನನ್ನ ಸದರಿ ಹೇಳಿಕೆಯಲ್ಲಿ ನಾನು student ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಸದರಿ ಅಪಘಾತವಾಗುವಲ್ಲಿ 1 ನೇ ಎದುರುದಾರರ ವಾಹನ ಸಂಬಂದ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಚಾನಾಕ್ಕಾಗಿ ಬ್ರೇಕ್ ಹಾಕಿದ್ದರಿಂದ ಗಾಡಿಯ ಮೇಲಿಂದ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯಲು

ಸುಳ್ಳಾದ ಪ್ರಸ್ತುತ ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.